**ಸಚಿವ ಸಂಪುಟದ ವಿಷಯಗಳನ್ನು ಮಾಧ್ಯಮಕ್ಕೆ ವಿವರಿಸಲು ಸಚಿವ ಸಂಪುಟದ ನಿರ್ಣಯದ ಕುರಿತು ಕಿರುಟಿಪ್ಪಣಿ ದಿನಾಂಕ: 17.01.2024**

| ಕ್ರ.ಸಂ | ಸಚಿವ ಸಂಪುಟದ ವಿಷಯ **(Cabinet Subject)** | ವಿವರ **(Details)** | ಅಂಕಿ–ಸಂಖ್ಯೆ **(Statistics)** | ಸಂಪುಟದ ನಿರ್ಣಯ |
|---|---|---|---|---|
| 2 | **ಇಂಧನ ಇಲಾಖೆ:** ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಬ್ಯಾಂಕ್‌ಗಳು / ಹಣಕಾಸು ಸಂಸ್ಥೆಗಳಿಂದ ರೂ.4430 ಕೋಟಿಗಳ ಸಾಲವನ್ನು ಪಡೆದಿರುವುದಕ್ಕೆ ಸರ್ಕಾರದ ಖಾತರಿ ನೀಡುವ ಬಗ್ಗೆ. | ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು (ಕ.ವಿ.ನಿ.ನಿ) ಈಗಾಗಲೇ ಬ್ಯಾಂಕ್/ಹಣಕಾಸು ಸಂಸ್ಥೆಗಳಿಂದ ಪಡೆದಿರುವ ಸಾಲ ರೂ.4,430.00 ಕೋಟಿಗಳ ಸಾಲಕ್ಕೆ ಸರ್ಕಾರಿ ಖಾತರಿಯನ್ನು ನೀಡುವಂತೆ ಪ್ರಸ್ತಾಪಿಸಲಾಗಿತ್ತು.<br><br>ವಿದ್ಯುತ್ ಸರಬರಾಜು ಕಂಪನಿಗಳ ನಗದು ಒಳಹರಿವು ಗಣನೀಯವಾಗಿ ಕಡಿಮೆಯಾಗಿದ್ದು, ರಾಜ್ಯ ಸರ್ಕಾರದ ಇಲಾಖೆಗಳು ಅಗಾಧವಾದ ವಿದ್ಯುತ್ ಶುಲ್ಕದ ಬಾಕಿ ಮೊತ್ತವನ್ನು ಪಾವತಿಸಬೇಕಾಗಿರುವುದರಿಂದ ಆರ್ಥಿಕ ಸಂಕಷ್ಟದಿಂದಾಗಿ ವಿದ್ಯುತ್ ಸರಬರಾಜು ಕಂಪನಿಗಳು ಕರ್ನಾಟಕ ವಿದ್ಯುತ್ ನಿಗಮ ನಿಯಮಿತಕ್ಕೆ ನಿಗದಿತ ಸಮಯದಲ್ಲಿ ವಿದ್ಯುತ್ ಖರೀದಿ ಬಿಲ್ಲುಗಳನ್ನು ಪಾವತಿಸಿರುವುದಿಲ್ಲ. | • 2022–23ನೇ ಸಾಲಿನ ನಗದು ಒಳಹರಿವಿನ ಕೊರತೆ –ರೂ. 8,664 ಕೋಟಿಗಳು.<br>• 2023–24ನೇ ಸಾಲಿನ ನಗದು ಒಳಹರಿವಿನ ಕೊರತೆ – ರೂ.5,134 ಕೋಟಿಗಳು.<br>• 30.09.2023ರ ಅಂತ್ಯಕ್ಕೆ ವಿದ್ಯುತ್ ಖರೀದಿ ಬಾಕಿ ಮೊತ್ತ ರೂ.17,366 ಕೋಟಿಗಳು. | ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರ ಮೊದಲನೇ ಅನುಚ್ಛೇದ, ಕ್ರಮ ಸಂಖ್ಯೆ: 9 ರಡಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು 2022–23 ನೇ ಸಾಲಿನಲಿ ರೂ.1630 ಕೋಟಿ ಮತ್ತು 2023–24ನೇ ಸಾಲಿನಲ್ಲಿ ರೂ.2800 ಕೋಟಿಗಳು, ಒಟ್ಟು ರೂ.4,430.00 ಕೋಟಿಗಳನ್ನು ಬ್ಯಾಂಕ್‌ಗಳು/ಹಣಕಾಸು ಸಂಸ್ಥೆಗಳಿಂದ ಪಡೆದಿರುವ ಸಾಲಕ್ಕೆ ಸರ್ಕಾರದ ಖಾತರಿ ನೀಡಲು ಸಚಿವ ಸಂಪುಟ ಒಪ್ಪಿದೆ. |

| | | | | |
|---|---|---|---|---|
| 3 | **<u>ಇಂಧನ ಇಲಾಖೆ:</u>**<br>"ಗೃಹ ಜ್ಯೋತಿ" ಯೋಜನೆಯ ಅನುಷ್ಠಾನ ಕುರಿತು ದಿನಾಂಕ: 05.06.2023 ರಂದು ಹೊರಡಿಸಿರುವ ಸರ್ಕಾರಿ ಆದೇಶವನನು ಮಾರ್ಪಡಿಸಿ ಮಾಸಿಕ 48 ಯೂನಿಟ್‌ಗಳಿಗಿಂತ<br>ಕಡಿಮೆ ಬಳಸುವ LT2 ಗ್ರಾಹಕರಿಗೆ ಹೆಚ್ಚುವರಿ 10% ಬದಲಿಗೆ ಹೆಚ್ಚುವರಿ 10 ಅರ್ಹತಾ ಯೂನಿಟ್‌ಗಳನ್ನು ಒದಗಿಸುವ ಬಗ್ಗೆ. | "ಗೃಹ ಜ್ಯೋತಿ" ಯೋಜನೆಯಡಿ ರಾಜ್ಯದಲ್ಲಿ ಕಡಿಮೆ ವಿದ್ಯುತ್ ಬಳಸುವ ಕುಟುಂಬಗಳಿಗೆ ಸಬ್ಸಿಡಿ ಅರ್ಹತೆಯ ಹಿಂದಿನ ಷರತ್ತುಗಳಲ್ಲಿ ಭಾಗಶ: ಮಾರ್ಪಾಡು ಮಾಡಲು ಪ್ರಸ್ತಾಪಿಸಲಾಗಿತ್ತು.<br><br>ಯೋಜನೆಯಲ್ಲಿ ಪ್ರತಿ ಗ್ರಾಹಕರಿಗೆ ಅರ್ಹತಾ ಯೂನಿಟ್‌ಗಳು ಕಳೆದ 12 ತಿಂಗಳು ಸರಾಸರಿ ಬಳಕೆ + ಹೆಚ್ಚುವರಿ 10% ಅನ್ನು ಆಧರಿಸಿದೆ. | • ರಾಜ್ಯದಲ್ಲಿ 1.95 ಕೋಟಿ ಗೃಹ ಬಳಕೆ ಗ್ರಾಹಕರು ಸರಾಸರಿ 53 ಯೂನಿಟ್ ಬಳಕೆ ಮಾಡುತ್ತಾರೆ.<br>• ಗ್ರಾಹಕರ ಯೂನಿಟ್‌ಗಳ ಬಳಕೆಯ ಹಿನ್ನೆಲೆಯಲ್ಲಿ ಅರ್ಹತಾ ಯೂನಿಟ್‌ಗಳು ಒಟ್ಟು 58 ಯೂನಿಟ್‌ಗಳಾಗಿರುತ್ತದೆ.<br>• 30 ಯೂನಿಟ್‌ಗಳನ್ನು ಬಳಸುವ ಬಡ ಕುಟುಂಬಗಳಿಗೆ ಅರ್ಹತಾ ಯೂನಿಟ್‌ಗಳು ಕೇವಲ 33 ಯೂನಿಟ್‌ಗಳಾಗಿರುತ್ತದೆ.<br>• ಇದನ್ನು ಶೇ.10% ಅರ್ಹತಾ ಯೂನಿಟ್‌ಗಳ ಬದಲಿಗೆ 10 ಯೂನಿಟ್‌ಗಳನ್ನು ನೀಡಲು ನಿರ್ಧರಿಸಲಾಗಿದೆ.<br>• ಬೆಸ್ಕಾಂನಲ್ಲಿ 69.73 ಲಕ್ಷ ಕುಟುಂಬಗಳು 48 ಯೂನಿಟ್‌ಗಿಂತ ಕಡಿಮೆ ಬಳಕೆ ಮಾಡುತ್ತಿದ್ದು, 10 ಯೂನಿಟ್‌ಗಳ ಹೆಚ್ಚುವರಿ ಹೆಚ್ಚಳದಿಂದ ರೂ.33.00 ಕೋಟಿಗಳ ವೆಚ್ಚ ತಗಲಬಹುದೆಂದು ಅಂದಾಜಿಸಲಾಗಿದೆ. | ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರ ಶೆಡ್ಯೂಲ್1, ಐಟಂ ನಂ.33ರ ಪ್ರಕಾರ, ದಿನಾಂಕ: 05.06.2023ರ ಸರ್ಕಾರಿ ಆದೇಶವನ್ನು ಮಾರ್ಪಡಿಸಿ ಗೃಹ ಜ್ಯೋತಿ ಯೋಜನೆಯಡಿಯಲ್ಲಿ LT2 ಗ್ರಾಹಕರಿಗೆ 48 ಯೂನಿಟ್‌ಗಳಿಗಿಂತ ಕಡಿಮೆ ಬಳಸುವ ಗ್ರಾಹಕರಿಗೆ ಹೆಚ್ಚುವರಿ 10% ಬದಲಿಗೆ ಹೆಚ್ಚುವರಿ 10 ಯೂನಿಟ್ ಅರ್ಹತಾ ಯೂನಿಟ್‌ಗಳನ್ನು ಒದಗಿಸಲು ಸಚಿವ ಸಂಪುಟ ನಿರ್ಧರಿಸಿದೆ. |

| | | | | |
|---|---|---|---|---|
| 7 | **ಉನ್ನತ ಶಿಕ್ಷಣ ಇಲಾಖೆ:** ಉನ್ನತ ಶಿಕ್ಷಣ ಇಲಾಖೆಯ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಲ್ಲಿ ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ನಿರ್ವಹಣಾ ತಂತ್ರಾಂಶ (UUCMS) ವನ್ನು ಅಭಿವೃದ್ಧಿಪಡಿಸಿ, ಅನುಷ್ಠಾನಗೊಳಿಸಲು ರೂ.15.13 ಕೋಟಿಗಳ ಪರಿಷ್ಕೃತ ಯೋಜನಾ ವೆಚ್ಚಕ್ಕೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ. | ರಾಜ್ಯದ ಉನ್ನತ ಶಿಕ್ಷಣ ವಲಯದ ಶೈಕ್ಷಣಿಕ ಮತ್ತು ಆಡಳಿತ ವಿಭಾಗಗಳಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಮಾಹಿತಿ ತಂತ್ರಜ್ಞಾನವನ್ನು ಉನ್ನತೀಕರಿಸಿ ಪಾರದರ್ಶಕ ಆಡಳಿತ ಮತ್ತು ಶೈಕ್ಷಣಿಕ ಗುಣಮಟ್ಟವನ್ನು ವೃದ್ಧಿಸಲಾಗಿದ್ದು, ಈ ಸಂಬಂಧ ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ನಿರ್ವಹಣಾ ತಂತ್ರಾಂಶ (Unified University & College Management System-UUCMS) ವನ್ನು ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲು ಪ್ರಸ್ತಾಪಿಸಲಾಗಿದೆ. | • ಒಟ್ಟು ಯೋಜನಾ ವೆಚ್ಚ ರೂ.15.13 ಕೋಟಿಗಳು.<br>• 30 ಸೀಟರ್ ಕಾಲ್ ಸೆಂಟರ್ ಸ್ಥಾಪಿಸಿ 30 ವಿಶ್ವವಿದ್ಯಾಲಯಗಳ ಮತ್ತು 4300 ಕಾಲೇಜುಗಳಿಗೆ ಸಹಾಯ ಮಾಡಿ 14.5 ಲಕ್ಷ ವಿದ್ಯಾರ್ಥಿಗಳ ಮಾಹಿತಿಯನ್ನು ಈಗಾಗಲೇ ಪೋರ್ಟಲ್‌ದಲ್ಲಿ ಅಳವಡಿಸಲಾಗಿದೆ.<br>• UUCMS ಆನ್‌ಲೈನ್ ಪೇಮೆಂಟ್ ಮುಖಾಂತರ ಅಡ್ಮಿಷನ್ ಮತ್ತು ಪರೀಕ್ಷಾ ಶುಲ್ಕವನ್ನು ವಿದ್ಯಾರ್ಥಿಗಳು ಸುಮಾರು ರೂ.400 ಕೋಟಿಗೂ ಅಧಿಕವಾಗಿ ಯುನಿವರ್ಸಿಟಿ ಹಾಗೂ ಕಾಲೇಜುಗಳಿಗೆ ಪಾವತಿಸಲಾಗಿದೆ.<br>• ಈ ತಂತ್ರಜ್ಞಾನ ಸೇವೆಗಳಿಂದ ಯೂನಿವರ್ಸಿಟಿ ಹಾಗೂ ಕಾಲೇಜುಗಳು ಮಾಡುತ್ತಿದ್ದ ಸುಮಾರ ರೂ.70.00 ರಿಂದ ರೂ.80.00 ಕೋಟಿಗಳ ವೆಚ್ಚ ಉಳಿತಾಯವಾಗಿದೆ. | ಉನ್ನತ ಶಿಕ್ಷಣ ಇಲಾಖೆಯ ವಿಶ್ವವಿದ್ಯಾಲಯ & ಕಾಲೇಜುಗಳಲ್ಲಿ, ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ನಿರ್ವಹಣಾ ತಂತ್ರಾಂಶ (Unified University & College Management System-UUCMS) ವನ್ನು ಇ–ಆಡಳಿತ ಇಲಾಖೆಯ, ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆನ್ಸ್ (CSG) ರವರ ಸಹಯೋಗದೊಂದಿಗೆ ರಾಜ್ಯದಲ್ಲಿ ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲು ಹಾಗೂ ಬಳಕೆದಾರರ ಅಹವಾಲುಗಳಿಗೆ ಪರಿಹಾರ ನೀಡಲು, ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿರುವ ರಾಜ್ಯ ನಿರ್ವಹಣಾ ಘಟಕದಲ್ಲಿ (PMU-UUCMS) 2 ವರ್ಷಗಳ ಅವಧಿಗೆ ಸಹಾಯವಾಣಿ (Helpdesk) ಅನ್ನು ರೂ.2.49 ಕೋಟಿಗಳ ವೆಚ್ಚದಲ್ಲಿ ಪ್ರಾರಂಭಿಸಿ ನಿರ್ವಹಿಸುವುದು ಸೇರಿದಂತೆ ಒಟ್ಟು ರಊ.15.13 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಸಚಿವ ಒಪ್ಪಿದೆ. |

| | | | | |
|---|---|---|---|---|
| 8 | **<u>ಕನ್ನಡ ಮತ್ತು ಸಂಸ್ಕೃತಿ ಇಲಾಖೆ:</u>**<br>ಶ್ರೀ ಜಗಜ್ಯೋತಿ ಬಸವಣ್ಣರವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕರನ್ನಾಗಿ ಘೋಷಿಸುವ ಬಗ್ಗೆ. | ನಮ್ಮ ಭಾರತದ ಸಂವಿಧಾನದಲ್ಲಿ ಪ್ರಸ್ತುತ ಎತ್ತಿಹಿಡಿದಿರುವ ಜಾತಿಭೇದವಿಲ್ಲದ, ವರ್ಗ ತಾರತಮ್ಯವಿಲ್ಲದ, ಲಿಂಗ ತಾರತಮ್ಯವಿಲ್ಲದ ಸಮಾಜವನ್ನು ರೂಪಿಸುವ ಕೆಲಸ ಬಸವಣ್ಣನವರ ನೇತೃತ್ವದಲ್ಲಿ ನಡೆಯಿತು.<br><br>ಬಸವಣ್ಣನವರ ನೇತೃತ್ವದಲ್ಲಿ ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ತಾತ್ವಿಕ ಮೌಲ್ಯಗಳು ಪ್ರತಿಪಾದನೆಗೊಂಡು ಶರಣ ಸಂಕುಲದಲ್ಲಿ ಅಳವಡಿಕೆಗೊಂಡಿದ್ದವು. ಬಸವಣ್ಣನವರನ್ನು ವೈಶ್ವಿಕ ಶ್ರೇಷ್ಠ ಮೌಲ್ಯಗಳನ್ನು ಪ್ರತಿಪಾದಿಸಿದ ಮಹನೀಯರಾಗಿ ನಮ್ಮ ಕರ್ನಾಟಕ ಸಾಂಸ್ಕೃತಿಕ ನಾಯಕರನ್ನಾಗಿ ಘೋಷಿಸಲು ಉದ್ದೇಶಿಸಲಾಗಿದೆ. | • ಬಸವಣ್ಣನವರು ಸಾರ್ವತ್ರಿಕವಾದ ಸಾರ್ವಕಾಲಿಕವಾದ ಸರ್ವಜನ ಸಮಾಭಾವದ ತಾತ್ವಿಕತೆಗಳ ಮೂಲಕ ಕಲ್ಯಾಣ ಸಮಾಜವನ್ನು ಕಟ್ಟುವುದಕ್ಕೆ ಬೇಕಾದ ನೀತಿಯನ್ನು ಬೋಧಿಸಿರುವುದರಿಂದ ನಮ್ಮ ದೇಶದ ಸಂವಿಧಾನದ ಆಶಯಗಳಿಗೆ ಅನುರೂಪವಾದ ಅವರ ಚಿಂತನೆಗಳು, ಬಸವಣ್ಣನವರ ಸಾಂಸ್ಕೃತಿಕ ನಾಯಕತ್ವಕ್ಕೆ ಸಮರ್ಥನೀಯವಾದ ನೆಲೆ ಒದಗಿಸಿವೆ. | ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರ ಮೊದಲ ಅನುಸೂಚಿಯ ಪ್ರಕರಣ–1ರ ಪ್ರಕಾರ ಜಗಜ್ಯೋತಿ ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕರನ್ನಾಗಿ ಘೋಷಿಸಲು ಸಚಿವ ಸಂಪುಟ ನಿರ್ಧರಿಸಿದೆ. |

| | | | | |
|---|---|---|---|---|
| 9 | **<u>ಕಾರ್ಮಿಕ ಇಲಾಖೆ:</u>** "ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮತ್ತು ಕಲ್ಯಾಣ ಸುಂಕ ವಿಧೇಯಕ, 2024"ಕ್ಕೆ ಅನುಮೋದನೆ ನೀಡುವ ಬಗ್ಗೆ. | ಅಸಂಘಟಿತ ಕಾರ್ಮಿಕರಲ್ಲಿ ಪ್ರಮುಖ ವರ್ಗವಾದ ಖಾಸಗಿ ವಾಣಿಜ್ಯ ಸಾರಿಗೆ ವಾಹನಗಳಾದ ಆಟೋ, ಟ್ಯಾಕ್ಸಿ, ಮ್ಯಾಕ್ಸಿಕ್ಯಾಬ್, ಲಾರಿ, ಬಸ್ ಇತ್ಯಾದಿ ವಾಹನಗಳ ಕಾರ್ಮಿಕರ ಹೆಚ್ಚಿನ ವೃತ್ತಿಯು ದೈಹಿಕ ಶ್ರಮ, ಅನಿರೀಕ್ಷಿತ ಅಪಘಾತಕ್ಕೆ ತುತ್ತಾಗುವ ವೃತ್ತಿಯಾಗಿದೆ ಕುಟುಂಬದಲ್ಲಿ ದುಡಿಯುವ ವ್ಯಕ್ತಿಯು ಅಪಘಾತದಿಂದ ನಿಧನರಾದಲ್ಲಿ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದಲ್ಲಿ ಅವರನ್ನು ಅವಲಂಬಿಸಿರುವ ಕುಟುಂಬವು ಸಾಮಾಜಿಕ ಹಾಗೂ ಆರ್ಥಿಕವಾಗಿ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. | • ನಿಧಿ ಸಂಗ್ರಹಣೆ, ನಿರ್ವಹಣೆ ಹಾಗೂ ಫಲಾನುಭವಿಗಳಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳ ವಿತರಣೆಗಾಗಿ ಪ್ರತ್ಯೇಕ Karnataka Motor Transport and other Allied Workers' Social Security and Welfarre Board ರಚಿಸಲು ಉದ್ದೇಶಿಸಿದೆ.<br>• ಶೇ.83 ಕ್ಕಿಂತ ಹೆಚ್ಚು ಕಾರ್ಮಿಕರು ಅಸಂಘಟಿತ ವಲಯದಲ್ಲಿದ್ದಾರೆಂದು ಅಂದಾಜಿಸಲಾಗಿದೆ. | 1. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯ್ದೆ 1957ರ ಕಲಂ 3(ಎ)ರ ಅನುಪಾತದನ್ವಯ Infrastructure Projects across the State ನಲ್ಲಿರುವ ಶೇಕಡ 57ರಲ್ಲಿ ಶೇಕಡ–7 ಮತ್ತು Equity in Investment in Bangalore Mass Rapid Transit Limited ನಲ್ಲಿರುವ ಶೇಕಡ 28 ಅನ್ನು ಸೇರಿಸಿ, ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮತ್ತು ಕಲ್ಯಾಣ ಮಂಡಳಿಗೆ ಎಂದು ಮರು ಹೆಸರಿಸಿ ಹೊಂದಾಣಿಕೆ ಮಾಡಿದಲ್ಲಿ ಒಟ್ಟು ಶೇಕಡ 35 ರಷ್ಟು ಸಾರಿಗೆ ಇಲಾಖೆಯ ವತಿಯಿಂದ ಮರುವಿಂಗಡಣೆ ಮಾಡಲು; |

| | | | | |
|---|---|---|---|---|
| | | ಪ್ರಸ್ತುತ ಖಾಸಗಿ ವಾಣಿಜ್ಯ ವಾಹನ ಚಾಲಕರು, ನಿರ್ವಾಹಕರು ಹಾಗೂ ಕ್ಲೀನರ್‌ಗಳಿಗೆ ಅಪಘಾತ ಪರಿಹಾರ ಸೌಲಭ್ಯ ಹಾಗೂ ಶೈಕ್ಷಣಿಕ ಧನಸಹಾಯ ಸೌಲಭ್ಯವನನು "ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ"ಯ ಮೂಲಕ ಒದಗಿಸಲಾಗುತ್ತಿದ್ದು, ತಗಲುವ ವೆಚ್ಚವನ್ನು ರಾಜ್ಯ ಸರ್ಕಾರವು ನೀಡುವ ಅನುದಾನದಿಂದ ಭರಿಸಲಾಗುತ್ತಿದೆ. | • ಸಾರಿಗೆ ಇಲಾಖೆಯು ಸಂಗ್ರಹಿಸುತ್ತಿರುವ Infrastructure Project Across the State ನಲ್ಲಿರುವ ಶೇ.57 ರಲ್ಲಿ ಶೇ.7 ಮತ್ತು Equity in Investment in Bengaluru Mass Rapid Transit Ltd., The Mukhya Mantri Grameena Rasthe Abhivruddhi Nidhi ಯಲ್ಲಿರುವ ಶೇ.28 ಸೇರಿದಂತೆ ಒಟ್ಟು ಶೇ.35 ರಷ್ಟು ಮೊತ್ತವನ್ನು ಈ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳಲಾಗುವುದು. ವಾರ್ಷಿಕವಾಗಿ ಅಂದಾಜು **ರೂ.300.00 ಕೋಟಿಗಳ** ನಿಧಿ ಸಂಗ್ರಹಣೆಯನ್ನು ನಿರೀಕ್ಷಿಸಲಾಗಿದೆ. | 2. ಅನುಬಂಧದಲ್ಲಿರುವ ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮತ್ತು ಕಲ್ಯಾಣ ಸುಂಕ ವಿಧೇಯಕ–2024ಕ್ಕೆ ಅನುಮೋದನೆ;<br>3. ಸದರಿ ವಿಧೇಯಕವನ್ನು ಮುಂಬರುವ ವಿಧಾನ ಮಂಡಲದ ಅಧಿವೇಶನದಲ್ಲಿ ಮಂಡಿಸಲು; |

| | | | | |
|---|---|---|---|---|
| 10 | **<u>ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ:</u>**<br>ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಧಿಕೃತ ಷೇರು ಬಂಡವಾಳವನ್ನು ರೂ.600.00 ಕೋಟಿಗಳಿಂದ ರೂ.1200.00 ಕೋಟಿಗಳಿಗೆ ಹೆಚ್ಚಿಸುವ ಬಗ್ಗೆ. | ಪ್ರಸ್ತುತ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಷೇರು ಬಂಡವಾಳವು ರೂ.600 ಕೋಟಿಗಳಾಗಿದ್ದು, ನಿಗಮ ಸ್ಥಾಪನೆಯಾದಾಗಿನಿಂದ ಇಲ್ಲಿಯವರೆಗೂ ಸುಮಾರು ರೂ.1099.00 ಕೋಟಿಗಳಷ್ಟು ಹಣವನ್ನು ಕರ್ನಾಟಕ ಸರ್ಕಾರದಿಂದ ಷೇರು ಬಂಡವಾಳ ರೂಪದಲ್ಲಿ ಪಡೆಯಲಾಗಿರುತ್ತದೆ.<br><br>ನಿಗಮದ ಅಧಿಕೃತ ಷೇರು ಬಂಡವಾಳವನ್ನು ರೂ.600.00 ಕೋಟಿಗಳಿಂದ ರೂ.1200.00 ಕೋಟಿಗಳಿಗೆ ಹೆಚ್ಚಿಸಲು ಪ್ರಸ್ತಾಪಿಸಲಾಗಿದೆ. | • ರೂ.1200.00 ಕೋಟಿಗಳಿಗೆ ಹೆಚ್ಚಿಸಲು ಪ್ರಸ್ತಾಪಿಸಲಾಗಿದೆ. | ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತದ ಅಧಿಕೃತ ಷೇರು ಬಂಡವಾಳವನ್ನು ರೂ.600.00 ಕೋಟಿಗಳಿಂದ ರೂ.1200.00 ಕೋಟಿಗಳಿಗೆ ಹೆಚ್ಚಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ. |

| | | | | |
|---|---|---|---|---|
| 11 | **<u>ಲೋಕೋಪಯೋಗಿ ಇಲಾಖೆ:</u>**<br>ಉಡುಪಿ ನ್ಯಾಯಾಲಯ ಆವರಣದಲ್ಲಿ ವಕೀಲರ ಭವನ ಮತ್ತು ಎ.ಡಿ.ಆರ್ ಸಂಕೀರ್ಣವನ್ನೊಳಗೊಂಡ ಅನೆಕ್ಸ್ ನ್ಯಾಯಾಲಯ ಕಟ್ಟಡದ (ಪ್ರಥಮ ಹಂತ) ನಿರ್ಮಾಣ ಕಾಮಗಾರಿಗಳನ್ನು ರೂ.15.14 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ. | ಹಳೆ ನ್ಯಾಯಾಲಯ ಕಟ್ಟಡವನ್ನು ತೆರವುಗೊಳಿಸಿ ಹೊಸದಾಗಿ ನ್ಯಾಯಾಲಯ ಸಂಕೀರಣವನ್ನು ನಿರ್ಮಿಸಲು ಪ್ರಸ್ತಾಪಿಸಲಾಗಿದೆ.<br><br>ರಾಜ್ಯದಲ್ಲಿ ನ್ಯಾಯಾಂಗ ಇಲಾಖೆಯು ಪ್ರಸ್ತಾಪಿಸಿದಂತೆ ಹೊಸ ನ್ಯಾಯಾಲಯ ಕಟ್ಟಡಗಳನ್ನು ಮತ್ತು ನ್ಯಾಯಾಧೀಶರ ವಸತಿ ಗೃಹಗಳ ನಿರ್ಮಾಣ ಮತ್ತು ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿಗಳನ್ನು ಹಂತ–ಹಂತವಾಗಿ ಕೈಗೊಳ್ಳಲಾಗುತ್ತದೆ. | • ಯೋಜನಾ ವೆಚ್ಚ ರೂ.15.14 ಕೋಟಿಗಳು.<br>• ನಾಲ್ಕು ಅಂತಸ್ತಿನ ಕಟ್ಟಡ 7750.50 ಚ.ಮೀ ವಿಸ್ತೀರ್ಣ ಒಳಗೊಂಡಿರುತ್ತದೆ. | ಉಡುಪಿ ನ್ಯಾಯಾಲಯ ಆವರಣದಲ್ಲಿ ವಕೀಲರ ಭವನ ಮತ್ತು ಎ.ಡಿ.ಆರ್ ಸಂಕೀರ್ಣವನ್ನೊಳಗೊಂಡ ಅನೆಕ್ಸ್ ನ್ಯಾಯಾಲಯ ಕಟ್ಟಡ ನಿರ್ಮಾಣ ಕಾಮಗಾರಿಯ (ಪ್ರಥಮ ಹಂತ) ರೂ.15.14 ಕೋಟಿಗಳ ಅಂದಾಜು ಪಟ್ಟಿಗೆ ಲೆಕ್ಕಶೀರ್ಷಿಕೆ 4059–80–051–0–32–386 ನ್ಯಾಯಾಲಯ ಕಟ್ಟಡಗಳ ನಿರ್ಮಾಣಕ್ಕೆ ಸಚಿವ ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ. |

| | | | | |
|---|---|---|---|---|
| 12 | **<u>ಕಂದಾಯ ಇಲಾಖೆ:</u>** ಶ್ರೀ ಶ್ರೀನಿವಾಸ ಪ್ರಸಾದ್, ಮಾನ್ಯ ಲೋಕಸಭಾ ಸದಸ್ಯರು, ಚಾಮರಾಜನಗರ ಕ್ಷೇತ್ರ ಇವರ ಆಪ್ತ ಸಹಾಯಕರನ್ನಾಗಿ ಶ್ರೀ ಕೆ.ಎಸ್. ಪ್ರಸನ್ನ ಶ್ರೀಕಂಠದತ್ತ, ನಿವೃತ್ತ ಪ್ರಥಮ ದರ್ಜೆ ಸಹಾಯಕರು, ರೇಷ್ಮೆ ಇಲಾಖೆ ಇವರನ್ನು ದಿನಾಂಕ: 24.05.2019 ರಿಂದ ಅನ್ವಯವಾಗುವಂತೆ ಗುತ್ತಿಗೆ ಆಧಾರದ ಮೇಲೆ ನೇಮಿಸುವ ಬಗ್ಗೆ. | ನಿವೃತ್ತ ಸರ್ಕಾರಿ ನೌಕರರಿಗೆ ಅನ್ವಯವಾಗುವಂತಹ ಸೇವಾ ನಿಬಂಧನೆ ಹಾಗೂ ಷರತ್ತುಗಳನ್ನು ಅನ್ವಯಿಸಿ ಒಬ್ಬ ನಿವೃತ್ತ ನೌಕರನನ್ನು ಆಪ್ತ ಸಿಬ್ಬಂದಿಯಾಗಿ ನೇಮಿಸಲು ಪ್ರಸ್ತಾಪಿಸಲಾಗಿದೆ. | | ಶ್ರೀ ಕೆ.ಎಸ್. ಪ್ರಸನ್ನ ಶ್ರೀಕಂಠ ದತ್ತ, ಪದವೀಧರರು ಹಾಗೂ ನಿವೃತ್ತ ಸರ್ಕಾರಿ ನೌಕರರು, ಮೈಸೂರು ಇವರನ್ನು ಶ್ರೀ ಶ್ರೀನಿವಾಸ ಪ್ರಸಾದ್, ಮಾನ್ಯ ಲೋಕಸಭಾ ಸದಸ್ಯರು, ಚಾಮರಾಜನಗರ ಕ್ಷೇತ್ರ ಇವರ ಆಪ್ತ ಸಹಾಯಕರಾಗಿ ದಿನಾಂಕ: 24.05.2019 ರಿಂದ ಜಾರಿಗೆ ಬರುವಂತೆ ಮಾನ್ಯ ಸಂಸತ್ ಸದಸ್ಯರ ಪದಾವಧಿಯವರೆಗೆ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಗುತ್ತಿಗೆ ಆಧಾರದ ಮೇಲೆ ನೇಮಿಸಲು ಸಚಿವ ಸಂಪುಟ ಅನುಮೋದಿಸಿದೆ. |

| | | | | |
|---|---|---|---|---|
| 13 | **<u>ಕಂದಾಯ ಇಲಾಖೆ:</u>** ವಿಜಯಪುರ ಜಿಲ್ಲೆ, ಬಸವನಬಾಗೇವಾಡಿ ತಾಲ್ಲೂಕಿನ "ನಂದಿಹಾಳ ಪಿ.ಹೆಚ್" ಗ್ರಾಮದ ಹೆಸರನ್ನು "ಆರೂಢ ನಂದಿಹಾಳ" ಎಂದು ಮರುನಾಮಕರಣ ಮಾಡುವ ಬಗ್ಗೆ. | ಕಂದಾಯ ದಾಖಲೆಗಳಲ್ಲಿ ನಂದಿಹಾಳ ಪಿ.ಹೆಚ್ ಗ್ರಾಮದ ಹೆಸರನ್ನು "ಆರೂಢ ನಂದಿಹಾಳ" ಎಂದು ಮರುನಾಮಕರಣ ಮಾಡುವಂತೆ ವಿಜಯಪುರ ಜಿಲ್ಲಾಧಿಕಾರಿಗಳು ಪ್ರಸ್ತಾಪಿಸಿರುತ್ತಾರೆ.<br><br>ಶ್ರೀ ಗುರು ಆರೂಢರು ನಂದಿಹಾಳ ಗ್ರಾಮದಲ್ಲಿ ಜನಿಸಿ, ಹುಬ್ಬಳ್ಳಿಯ ಶ್ರೀ ಗುರು ಸಿದ್ಧಾರೂಢರ ಪರಮ ಶಿಷ್ಯರಾಗಿ ಆರೂಢರಾದರು. | | ವಿಜಯಪುರ ಜಿಲ್ಲೆ ಬಸವನಬಾಗೇವಾಡಿ ತಾಲ್ಲೂಕಿನ "ನಂದಿಹಾಳ ಪಿ.ಹೆಚ್" ಗ್ರಾಮದ ಹೆಸರನ್ನು "ಆರೂಢ ನಂದಿಹಾಳ" ಎಂದು ಮರುನಾಮಕರಣ ಮಾಡಲು ಸಚಿವ ಸಂಪುಟ ಒಪ್ಪಿದೆ. |

| | | | | |
|---|---|---|---|---|
| 14 | **<u>ಕಂದಾಯ ಇಲಾಖೆ:</u>** ಚಿಕ್ಕಮಗಳೂರು ಜಿಲ್ಲೆ, ಐ.ಡಿ (ಇನಾಂ ದತ್ತಾತ್ರೇಯ) ಪೀಠದ ಶ್ರೀ ಗುರುದತ್ತಾತ್ರೇಯ ಬಾಬಾ ಬುಡನ್ ಸ್ವಾಮಿ ದರ್ಗಾ ಅಧಿಸೂಚಿತ ಸಂಸ್ಥೆಗೆ ಸಂಬಂಧಿಸಿದಂತೆ ಶ್ರೀ ಸೈಯದ್ ಗೌಸ್ ಮೊಹಿಯುದ್ದೀನ್ ಶಾಖಾದ್ರಿ ಇವರು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಎಸ್.ಎಲ್.ಪಿ (ಸಿವಿಲ್) ಸಂಖ್ಯೆ: 10131/2023 ಗೆ ಆಕ್ಷೇಪಣಾ ಹೇಳಿಕೆಯನ್ನು ತಯಾರಿಸುವ ಕುರಿತು ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಸಚಿವ ಸಂಪುಟದ ಉಪಸಮಿತಿ ರಚಿಸುವ ಬಗ್ಗೆ. | ಈ ಧಾರ್ಮಿಕ ಸಂಸ್ಥೆಯಲ್ಲಿ ಚಾಲ್ತಿಯಲ್ಲಿದ್ದ ಪೂಜಾ ಸ್ಥಳಗಳ (ವಿಶೇಷ ನಿಬಂಧನೆಗಳು) ಅಧಿನಿಯಮ 1991ರ ರನ್ವಯ 1947ರ ಆಗಸ್ಟ್ 15 ರಲ್ಲಿ ಆಚರಿಸಲಾಗುತ್ತಿದ್ದ ಧಾರ್ಮಿಕ ಪದ್ದತಿಗಳ ಸ್ವರೂಪ ಮತ್ತು ಗುಣಲಕ್ಷಗಳನ್ನು ಮುಂದುವರೆಸಿಕೊಂಡು ಹೋಗುವಂತೆ ಆದೇಶಿಸಿದ್ದನ್ನು ಶ್ರೀ ಗುರು ದತ್ತಾತ್ರೇಯ ಪೀಠ ದೇವಸ್ಥಾನ ಸಂವರ್ಧನಾ ಸಮಿತಿಯವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಮುಖಾಂತರ ಪ್ರಶ್ನಿಸಿದ್ದು, ಈ ರಿಟ್ ಅರ್ಜಿಯನ್ನು ಮಾನ್ಯ ಉಚ್ಚ ನ್ಯಾಯಾಲಯವು ಮಾನ್ಯ ಮಾಡಿದೆ ಹಾಗೂ ಸರ್ಕಾರದ ಆದೇಶವನ್ನು ರದ್ದುಪಡಿಸಿದೆ. | • ಮಾನ್ಯ ಮುಖ್ಯಮಂತ್ರಿಯವರು ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಬೇಕಾದ ಲಿಖಿತ ಆಕ್ಷೇಪಣಾ ಹೇಳಿಕೆಗಳನ್ನು ಸಲ್ಲಿಸಲು ಒಂದು ಸಚಿವ ಸಂಪುಟದ ಉಪ ಸಮಿತಿ ರಚಿಸಲು ಸೂಚಿಸಿರುತ್ತಾರೆ. | ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಎಸ್.ಎಲ್.ಪಿ (ಸಿವಿಲ್) ಸಂಖ್ಯೆ: 10131/2023 ಪ್ರಕರಣದಲ್ಲಿ ಸರ್ಕಾರದ ನಿಲುವನ್ನು ವ್ಯಕ್ತಪಡಿಸಿ, ಲಿಖಿತ ಆಕ್ಷೇಪಣಾ ಹೇಳಿಕೆಗಳನ್ನು ದಾಖಲಿಸಲು ಅನುವಾಗುವಂತೆ ಪ್ರಕರಣವನ್ನು ಸಮಗ್ರವಾಗಿ ಪರಿಶೀಲಿಸಿ, ಶಿಫಾರಸ್ಸುಗಳನ್ನು ಸಲ್ಲಿಸಲು ಈ ಕೆಳಕಂಡ ಸಚಿವರುಗಳನ್ನೊಳಗೊಂಡಂತೆ ಸಚಿವ ಸಂಪುಟದ ಉಪಸಮಿತಿ ರಚಿಸಿರುತ್ತದೆ.<br>1. **ಅಧ್ಯಕ್ಷರು** –ಮಾನ್ಯ ಗೃಹ ಸಚಿವರು.<br>2. **ಸದಸ್ಯರು** – ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರು.<br>3. **ಸದಸ್ಯರು** – ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು. |

| | | | | |
|---|---|---|---|---|
| | | ಮಾನ್ಯ ಉಚ್ಚ ನ್ಯಾಯಾಲಯದ ಈ ತೀರ್ಪನ್ನು ಶ್ರೀ ಸೈಯದ್ ಗೌಸ್ ಮೊಹಿಯುದ್ದೀನ್ ಶಾಖಾದ್ರಿ ರವರು ರಿಟ್ ಅಪೀಲ್ ಸಲ್ಲಿಸಿದ್ದು, ಈ ಅಪೀಲು ವಜಾಗೊಂಡಿದೆ. ಶ್ರೀ ಶಾಖಾದ್ರಿ ರವರು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್‌ಎಲ್‌ಪಿ (ಸಿವಿಲ್) ದಾಖಲಿಸಿರುತ್ತಾರೆ | | 4. **ಸದಸ್ಯರು** – ಮಾನ್ಯ ಕಂದಾಯ ಸಚಿವರು.<br>5. **ಸದಸ್ಯರು** – ಮಾನ್ಯ ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವರು. |

| | | | | |
|---|---|---|---|---|
| 15 | **<u>ಕಂದಾಯ ಇಲಾಖೆ:</u>** ಶಿವಮೊಗ್ಗ ನಗರದ ಹಳೆ ಜೈಲು ಆವರಣದ ಸ.ನಂ. 75 ರಲ್ಲಿನ 46–09 ಎಕರೆ / ಗುಂಟೆ ಮತ್ತು ಸ.ನಂ. 123 ರಲ್ಲಿನ 0–23 ಗುಂಟೆ ಒಟ್ಟು 46–32 ಎಕರೆ / ಗುಂಟೆ ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಿದ ಪ್ರದೇಶವನ್ನು "ಅಲ್ಲಮ ಪ್ರಭು ಉದ್ಯಾನವನ" ಎಂದು ನಾಮಕರಣ ಮಾಡುವ ಬಗ್ಗೆ. | ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವಿಯಲ್ಲಿ 12ನೇ ಶತಮಾನದ ಶಿವಶರಣ ಮತ್ತು ಅನುಭವ ಮಂಟಪದ ಅಧ್ಯಕ್ಷರಾದ ಅಲ್ಲಮ ಪ್ರಭು ರವರು ಜನಿಸಿದ್ದು, ಅವರ ನೆನಪು ಸದಾ ಕಾಲ ಉಳಿಯಲು ಹಳೆ ಜಿಲ್ಲಾ ಕಾರಾಗೃಹದ ಮೈದಾನ್ ಪ್ರದೇಶವನ್ನು "ಅಲ್ಲಮ ಪ್ರಭು ಉದ್ಯಾನವನ" ಎಂದು ನಾಮಕರಣ ಮಾಡಲು ಯುವನಿಧಿ ಕಾರ್ಯಕ್ರಮದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಘೋಷಿಸಿರುತ್ತಾರೆ. | | ಶಿವಮೊಗ್ಗ ನಗರದ ಹಳೆ ಜೈಲು ಆವರಣದ ಸ.ನಂ.75 ರಲ್ಲಿನ 46–09 ಎಕರೆ/ಗುಂಟೆ ಮತ್ತು ಸ.ನಂ. 123 ರಲ್ಲಿನ 0–23 ಗುಂಟೆ ಒಟ್ಟು 46–32 ಎಕರೆ–ಗುಂಟೆ ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಿದ ಪ್ರದೇಶವನ್ನು "ಅಲ್ಲಮ ಪ್ರಭು ಉದ್ಯಾನವನ" ಎಂದು ನಾಮಕರಣ ಮಾಡಲು;<br>**ಅಥವಾ**<br>ಸಚಿವ ಸಂಪುಟವು ತೆಗೆದುಕೊಳ್ಳಬಹುದಾದ ಇನ್ನಿತರ ನಿರ್ಣಯ. |

| | | | | |
|---|---|---|---|---|
| 16 | **<u>ಕಂದಾಯ ಇಲಾಖೆ:</u>**<br>ಬೆಳಗಾವಿ ಜಿಲ್ಲೆಯ ಕಿತ್ತೂರು ತಾಲ್ಲೂಕನ್ನು "ಚನ್ನಮ್ಮನ ಕಿತ್ತೂರು" ಎಂದು ಮರುನಾಮಕರಣ ಮಾಡುವ ಬಗ್ಗೆ. | ಬೆಳಗಾವಿ ಜಿಲ್ಲೆಯ ಕಿತ್ತೂರು ತಾಲ್ಲೂಕನ್ನು "ಚನ್ನಮ್ಮನ ಕಿತ್ತೂರು" ಎಂದು ಮರುನಾಮಕರಣ ಮಾಡುವ ಕುರಿತು ಪ್ರಸ್ತಾಪಿಸಲಾಗಿದೆ. | | ಬೆಳಗಾವಿ ಜಿಲ್ಲೆಯ "ಕಿತ್ತೂರು ತಾಲ್ಲೂಕ"ನ್ನು "ಚನ್ನಮ್ಮನ ಕಿತ್ತೂರು ತಾಲ್ಲೂಕು" ಎಂದು ಮರುನಾಮಕರಣ ಮಾಡಲು ಸಚಿವ ಸಂಪುಟ ಒಪ್ಪಿದೆ. |

| | | | | |
|---|---|---|---|---|
| 17 | **<u>ಕಂದಾಯ ಇಲಾಖೆ:</u>** ಕೇಂದ್ರ ಯೋಜನೆಯಾದ "Digital India Land Records" ಆಧುನಿಕರಣ ಕಾರ್ಯಕ್ರಮದಡಿ (DILRMP) ಒಟ್ಟು 3455 ಸಂಖ್ಯೆಯ ಕಂಪ್ಯೂಟರ್, ಸ್ಕ್ಯಾನರ್, ರೋವರ್ ಮತ್ತು ಪ್ರೀಂಟರ್‌ಗಳನ್ನು ರೂ.30.45 ಕೋಟಿಗಳ ಅಂದಾಜು ವೆಚ್ಚದಲ್ಲಿ ಟೆಂಡರ್ ಮೂಲಕ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ. | | • ಒಟ್ಟು ಯೋಜನಾ ವೆಚ್ಚ ರೂ.30.45 ಕೋಟಿಗಳು.<br>• ಟೆಂಡರ್ ಪ್ರಕ್ರಿಯೆ ಮೂಲಕ ಖರೀದಿಸಲಾಗುವುದು. | ಡೆಸ್ಕಟಾಪ್ಸ್ ಕಂಪ್ಯೂಟರ್ಸ್, ಡೆಸ್ಕಟಾಪ್ಸ್ ಹೈಎಂಡ್, ಸ್ಕ್ಯಾನರ್, ರೋವರ್ ಹಾಗೂ ಪ್ರೀಂಟರ್ ಒಟ್ಟು 3455 ವಸ್ತುಗಳ ಖರೀದಿಗೆ ತಗಲುವ ಅಂದಾಜು ರೂ.31.00 ಕೋಟಿಗಳು ಹಾಗೂ ಭವಿಷ್ಯದಲ್ಲಿ ಅಧಿಕ ಪ್ರಮಾಣದ ಉಪಕರಣಗಳ ಅಗತ್ಯತೆ ಉಂಟಾದಲ್ಲಿ ಈ ಯೋಜನೆಯಡಿಯಲ್ಲಿ ಟೆಂಡರ್ ವಸ್ತುಗಳ ಪ್ರಮಾಣದ 25% ಮಿತಿಯೊಳಗೆ ಹೆಚ್ಚುವರಿ ವಸ್ತುಗಳನ್ನು ನಿಯಮಾನುಸಾರ ಖರೀದಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ. |

| | | | | |
|---|---|---|---|---|
| 18 | **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ:**<br>ಜಲ ಜೀವನ್ ಮಿಷನ್ ಯೋಜನೆಯಡಿ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲ್ಲೂಕಿನ ಅಂತರಸಂತೆ ಮತ್ತು ಇತರೆ 134 ಜನವಸತಿಗಳಿಗೆ ರೂ.101.73 ಕೋಟಿಗಳ ಅಂದಾಜು ಮತ್ತದಲ್ಲಿ ಬಹುಗ್ರಾಮ ಕುಡಿಯುವ ನೀರು ಯೋಜನೆಯನ್ನು DBOT ಆಧಾರದ ಮೇಲೆ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ. | ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆ ತಾಲ್ಲೂಕಿನ 134 ಜನವಸತಿ ತಾಲ್ಲೂಕುಗಳಿಗೆ DBOT ಆಧಾರದ ಮೇಲೆ ಜಲ್ ಜೀವನ್ ಮಿಷನ್ ಯೋಜನೆಯಡಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ಅನುಷ್ಠಾನಗೊಳಸಲು ಆಡಳಿತಾತ್ಮಕ ಅನುಮೋದನೆ ನೀಡಲು ಪ್ರಸ್ತಾಪಿಸಲಾಗಿದೆ. | • ಒಟ್ಟು ಯೋಜನಾ ವೆಚ್ಚ ರೂ.101.73 ಕೋಟಿಗಳು. | ಮೈಸೂರು ಜಿಲ್ಲೆಯ ಹೆಚ್.ಡಿ. ಕೋಟೆ ತಾಲ್ಲೂಕಿನ ಅಂತರಸಂತೆ ಮತ್ತು ಇತರೆ 134 ಜನವಸತಿಗಳ ಬಹುಗ್ರಾಮ ಕುಡಿಯುವ ನೀರು ಯೋಜನೆಯನ್ನು **DBOT** ಆಧಾರದ ಮೇಲೆ ಒಟ್ಟು ಮೊತ್ತ ರೂ.101.73 ಕೋಟಿಗಳಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ;<br>**ಹಾಗೂ**<br>ಸದರಿ ಯೋಜನೆಯನ್ನು ಜಲ್ ಜೀವನ್ ಮಿಷನ್‌ನಡಿ ಸಂಯೋಜಿತಗೊಳಿಸಿ ಕೇಂದ್ರ ಸರ್ಕಾರದ ಅನುದಾನ ರೂ.42.97 ಕೋಟಿಗಳನ್ನು ವಿನಿಯೋಗಿಸಲು ಅನುಮೋದನೆ;<br>**ಮತ್ತು**<br>ಯೋಜನೆಯ ಅನುಷ್ಠಾನಕ್ಕೆ ಹಾಗೂ 5 ವರ್ಷಗಳ ಯೋಜನೆಯ ಕಾರ್ಯಚರಣೆ ಮತ್ತು ನಿರ್ವಹಣೆಗೆ ರಾಜ್ಯ ಸರ್ಕಾರದ ರೂ.58.76 ಕೋಟಿಗಳ ಅನುದಾನವನ್ನು ವಿನಿಯೋಗಿಸಿಕೊಳ್ಳಲು;<br>ಸಚಿವ ಸಂಪುಟ ಒಪ್ಪಿದೆ. |

| | | | | |
|---|---|---|---|---|
| 19 | **<u>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ:</u>** ಜಲ್ ಜೀವನ್ ಮಿಷನ್ ಯೋಜನೆಯಡಿ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲ್ಲೂಕಿನ ಹಂಪಾಪುರ ಮತ್ತು ಇತರೆ 48 ಜನವಸತಿಗಳಿಗೆ ರೂ.65.07 ಕೋಟಿಗಳ ಅಂದಾಜು ಮೊತ್ತದಲ್ಲಿ ಬಹುಗ್ರಾಮ ಕುಡಿಯುವ ನೀರು ಯೋಜನೆಯನ್ನು DBOT ಆಧಾರದ ಮೇಲೆ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ. | ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆ ತಾಲ್ಲೂಕಿನ ಹಂಪಾಪುರ ಮತ್ತು ಇತರೆ 48 ಜನವಸತಿ ತಾಲ್ಲೂಕುಗಳಿಗೆ DBOT ಆಧಾರದ ಮೇಲೆ ಜಲ್ ಜೀವನ್ ಮಿಷನ್ ಯೋಜನೆಯಡಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ಅನುಷ್ಠಾನಗೊಳಸಲು ಆಡಳಿತಾತ್ಮಕ ಅನುಮೋದನೆ ನೀಡಲು ಪ್ರಸ್ತಾಪಿಸಲಾಗಿದೆ. | • ಒಟ್ಟು ಯೋಜನಾ ವೆಚ್ಚ ರೂ. 65.07 ಕೋಟಿಗಳು.<br>• 48 ಜನವಸತಿ ತಾಲ್ಲೂಕುಗಳು. | ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆ ತಾಲ್ಲೂಕಿನ ಹಂಪಾಪುರ ಮತ್ತು ಇತರೆ 48 ಜನವಸತಿ ತಾಲ್ಲೂಕುಗಳಿಗೆ DBOT ಆಧಾರದ ಮೇಲೆ ಜಲ್ ಜೀವನ್ ಮಿಷನ್ ಯೋಜನೆಯಡಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ಒಟ್ಟು ರೂ.65.07 ಕೋಟಿಗಳಲ್ಲಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿದೆ. |

| | | | | |
|---|---|---|---|---|
| 20 | **<u>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ:</u>**<br>ಜಲ್ ಜೀವನ್ ಮಿಷನ್ ಯೋಜನೆಯಡಿ ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೂಕಿನ ದೊಡ್ಡಬಾಗಿಲು ಮತ್ತು ಇತರೆ 24 ಜನವಸತಿಗಳಿಗೆ ರೂ.34.00 ಕೋಟಿಗಳ ಅಂದಾಜು ಮೊತ್ತದಲ್ಲಿ ಬಹುಗ್ರಾಮ ಕುಡಿಯುವ ನೀರು ಯೋಜನೆಯನ್ನು DBOT ಆಧಾರದ ಮೇಲೆ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ. | ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೂಕಿನ ದೊಡ್ಡಬಾಗಿಲು ಮತ್ತು ಇತರೆ 24 ಜನವಸತಿ ತಾಲ್ಲೂಕುಗಳಿಗೆ DBOT ಆಧಾರದ ಮೇಲೆ ಜಲ್ ಜೀವನ್ ಮಿಷನ್ ಯೋಜನೆಯಡಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ಅನುಷ್ಠಾನಗೊಳಸಲು ಆಡಳಿತಾತ್ಮಕ ಅನುಮೋದನೆ ನೀಡಲು ಪ್ರಸ್ತಾಪಿಸಲಾಗಿದೆ. | • ಒಟ್ಟು ಯೋಜನಾ ವೆಚ್ಚ ರೂ.34.00 ಕೋಟಿಗಳು.<br>• 24 ಜನವಸತಿ ತಾಲ್ಲೂಕುಗಳು. | ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆ ತಾಲ್ಲೂಕಿನ ದೊಡ್ಡಬಾಗಿಲು ಮತ್ತು ಇತರೆ 24 ಜನವಸತಿ ತಾಲ್ಲೂಕುಗಳಿಗೆ DBOT ಆಧಾರದ ಮೇಲೆ ಜಲ್ ಜೀವನ್ ಮಿಷನ್ ಯೋಜನೆಯಡಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ಒಟ್ಟು ರೂ.34.00 ಕೋಟಿಗಳಲ್ಲಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿದೆ. |

| | | | | |
|---|---|---|---|---|
| 21 | **<u>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ:</u>**<br>ಜಲ್ ಜೀವನ್ ಮಿಷನ್ ಯೋಜನೆಯಡಿ ಹಾವೇರಿ ಜಿಲ್ಲೆಯ ಹಾವೇರಿ ತಾಲ್ಲೂಕಿನ ನೆಗಳೂರು ಹಾಗೂ ಇತರೆ 3 ಗ್ರಾಮಗಳಿಗೆ ರೂ.18.00 ಕೋಟಿಗಳ ಅಂದಾಜು ಮೊತ್ತದಲ್ಲಿ ಬಹುಗ್ರಾಮ ಕುಡಿಯುವ ನೀರು ಯೋಜನೆಯ ಪುನಶ್ಚೇತನ ಕಾಮಗಾರಿಗಳನ್ನು DBOT ಆಧಾರದ ಮೇಲೆ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ. | ಜಲ್ ಜೀವನ್ ಮಿಷನ್ ಯೋಜನೆಯಡಿ ಹಾವೇರಿ ಜಿಲ್ಲೆಯ ಹಾವೇರಿ ತಾಲ್ಲೂಕಿನ ನೆಗಳೂರು ಹಾಗೂ ಇತರೆ 3 ಗ್ರಾಮಗಳಿಗೆ ರೂ.18.00 ಕೋಟಿಗಳ ಅಂದಾಜು ಮೊತ್ತದಲ್ಲಿ ಬಹುಗ್ರಾಮ ಕುಡಿಯುವ ನೀರು ಯೋಜನೆಯ ಪುನಶ್ಚೇತನ ಕಾಮಗಾರಿಗಳನ್ನು DBOT ಆಧಾರದ ಮೇಲೆ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಲು ಪ್ರಸ್ತಾಪಿಸಲಾಗಿತ್ತು. | • ನೆಗಳೂರು ಹಾಗೂ ಇತರೆ 3 ಗ್ರಾಮಗಳಿಗೆ ರೂ.18.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುವುದು. | ಜಲ್ ಜೀವನ್ ಮಿಷನ್ ಯೋಜನೆಯಡಿ ಹಾವೇರಿ ಜಿಲ್ಲೆಯ ಹಾವೇರಿ ತಾಲ್ಲೂಕಿನ ನೆಗಳೂರು ಹಾಗೂ ಇತರೆ 3 ಗ್ರಾಮಗಳಿಗೆ ರೂ.18.00 ಕೋಟಿಗಳ ಅಂದಾಜು ಮೊತ್ತದಲ್ಲಿ ಬಹುಗ್ರಾಮ ಕುಡಿಯುವ ನೀರು ಯೋಜನೆಯ ಪುನಶ್ಚೇತನ ಕಾಮಗಾರಿಗಳನ್ನು DBOT ಆಧಾರದ ಮೇಲೆ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿದೆ. |

| | | | | |
|---|---|---|---|---|
| 22 | <u>**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ:**</u><br>ಜಲ್ ಜೀವನ್ ಮಿಷನ್ ಯೋಜನೆಯಡಿ ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಕುಡ್ಲ ಮತ್ತು ಇತರೆ 5 ಗ್ರಾಮಗಳಿಗೆ ರೂ.26.00 ಕೋಟಿಗಳ ಅಂದಾಜು ಮೊತ್ತದಲ್ಲಿ ಬಹುಗ್ರಾಮ ಕುಡಿಯುವ ನೀರು ಯೋಜನೆಯ ಪುನಶ್ಚೇತನ ಕಾಮಗಾರಿಗಳನ್ನು DBOT ಆಧಾರದ ಮೇಲೆ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ. | ಜಲ್ ಜೀವನ್ ಮಿಷನ್ ಯೋಜನೆಯಡಿ ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಕುಡ್ಲ ಮತ್ತು ಇತರೆ 5 ಗ್ರಾಮಗಳಿಗೆ ರೂ.26.00 ಕೋಟಿಗಳ ಅಂದಾಜು ಮೊತ್ತದಲ್ಲಿ ಬಹುಗ್ರಾಮ ಕುಡಿಯುವ ನೀರು ಯೋಜನೆಯ ಪುನಶ್ಚೇತನ ಕಾಮಗಾರಿಗಳನ್ನು DBOT ಆಧಾರದ ಮೇಲೆ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಲು ಪ್ರಸ್ತಾಪಿಸಲಾಗಿತ್ತು. | • ಒಟ್ಟು ಯೋಜನಾ ವೆಚ್ಚ ರೂ.26.00 ಕೋಟಿಗಳು.<br>• ಕುಡ್ಲ ಮತ್ತು 5 ಗ್ರಾಮಗಳು. | ಜಲ್ ಜೀವನ್ ಮಿಷನ್ ಯೋಜನೆಯಡಿ ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಕುಡ್ಲ ಮತ್ತು ಇತರೆ 5 ಗ್ರಾಮಗಳಿಗೆ ರೂ.26.00 ಕೋಟಿಗಳ ಅಂದಾಜು ಮೊತ್ತದಲ್ಲಿ ಬಹುಗ್ರಾಮ ಕುಡಿಯುವ ನೀರು ಯೋಜನೆಯ ಪುನಶ್ಚೇತನ ಕಾಮಗಾರಿಗಳನ್ನು DBOT ಆಧಾರದ ಮೇಲೆ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿದೆ. |

| | | | | |
|---|---|---|---|---|
| 23 | **<u>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ:</u>**<br>ಜಲ್ ಜೀವನ್ ಮಿಷನ್ ಯೋಜನೆಯಡಿ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ಮತ್ತು ಉಳ್ಳಾಲ ತಾಲ್ಲೂಕಿನ 24 ಗ್ರಾಮಗಳಿಗೆ ಕೈರಂಗಳದಲ್ಲಿರುವ KUWSDB ನೀರು ಶುದ್ಧೀಕರಣ ಘಟಕದಿಂದ ಬಹುಗ್ರಾಮ ಕುಡಿಯುವ ನೀರು ಯೋಜನೆಯನ್ನು ರೂ.245.00 ಕೋಟಿಗಳ ಅಂದಾಜು ಮೊತ್ತದಲ್ಲಿ DBOT ಆಧಾರದ ಮೇಲೆ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ. | ಜಲ್ ಜೀವನ್ ಮಿಷನ್ ಯೋಜನೆಯಡಿ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ಮತ್ತು ಉಳ್ಳಾಲ ತಾಲ್ಲೂಕಿನ 24 ಗ್ರಾಮಗಳಿಗೆ ಕೈರಂಗಳದಲ್ಲಿರುವ KUWSDB ನೀರು ಶುದ್ಧೀಕರಣ ಘಟಕದಿಂದ ಬಹುಗ್ರಾಮ ಕುಡಿಯುವ ನೀರು ಯೋಜನೆಯನ್ನು ರೂ.245.00 ಕೋಟಿಗಳ ಅಂದಾಜು ಮೊತ್ತದಲ್ಲಿ DBOT ಆಧಾರದ ಮೇಲೆ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆಗೆ ಪ್ರಸ್ತಾಪಿಸಲಾಗಿತ್ತು. | • ಒಟ್ಟು ಯೋಜನಾ ವೆಚ್ಚ ರೂ.245.00 ಕೋಟಿಗಳು.<br>• ಬಂಟ್ವಾಳ ಮತ್ತ ಉಳ್ಳಾಲ ತಾಲ್ಲೂಕಿನ 24 ಗ್ರಾಮಗಳು. | ಜಲ್ ಜೀವನ್ ಮಿಷನ್ ಯೋಜನೆಯಡಿ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ಮತ್ತು ಉಳ್ಳಾಲ ತಾಲ್ಲೂಕಿನ 24 ಗ್ರಾಮಗಳಿಗೆ ಕೈರಂಗಳದಲ್ಲಿರುವ KUWSDB ನೀರು ಶುದ್ಧೀಕರಣ ಘಟಕದಿಂದ ಬಹುಗ್ರಾಮ ಕುಡಿಯುವ ನೀರು ಯೋಜನೆಯನ್ನು ರೂ.245.00 ಕೋಟಿಗಳ ಅಂದಾಜು ಮೊತ್ತದಲ್ಲಿ DBOT ಆಧಾರದ ಮೇಲೆ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿದೆ. |

| | | | | |
|---|---|---|---|---|
| 24 | **<u>ಸಮಾಜ ಕಲ್ಯಾಣ ಇಲಾಖೆ:</u>** ಬೆಂಗಳೂರು ನಗರ ಜಿಲ್ಲೆ ಆನೇಕಲ್ ಪಟ್ಟಣದಲ್ಲಿ ನಿರ್ಮಾಣಗೊಳ್ಳುತ್ತಿರುವ ಡಾ. ಬಿ.ಆರ್. ಅಂಬೇಡ್ಕರ್ ಭವನದ ಪರಿಷ್ಕೃತ ಅಂದಾಜು ಮೊತ್ತ ರೂ.17.40 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ. | ಬೆಂಗಳೂರು ನಗರ ಜಿಲ್ಲೆ ಆನೇಕಲ್ ಪಟ್ಟಣದಲ್ಲಿ ನಿರ್ಮಾಣಗೊಳ್ಳುತ್ತಿರುವ ಡಾ. ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣ ಮಾಡಲು ಒಟ್ಟು ರೂ.17.40 ಕೋಟಿಗಳ ಅಂದಾಜು ವೆಚ್ಚಕ್ಕೆ ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾಪಿಸಲಾಗಿದೆ. | • ಈ ಮೊದಲು ರೂ.13.25 ಕೋಟಿಗಳಿಗೆ ಘಟನೋತ್ತರ ಅನುಮೋದನೆ ಹಾಗೂ ಹೆಚ್ಚುವರಿ ರೂ.4.15 ಕೋಟಿಗಳಿಗೆ ಮಂಜೂರಾತಿ ಒಟ್ಟಾರೆ, ರೂ.17.40 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ. | ಬೆಂಗಳೂರು ನಗರ ಜಿಲ್ಲೆ ಆನೇಕಲ್ ಪಟ್ಟಣದಲ್ಲಿ ನಿರ್ಮಾಣಗೊಳ್ಳುತ್ತಿರುವ ಡಾ. ಬಿ.ಆರ್. ಅಂಬೇಡ್ಕರ್ ಭವನದ ಪರಿಷ್ಕೃತ ಅಂದಾಜು ಮೊತ್ತ ರೂ.17.40 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ. |

| | | | | |
|---|---|---|---|---|
| 25 | **<u>ಸಮಾಜ ಕಲ್ಯಾಣ ಇಲಾಖೆ:</u>** ಪರಿಶಿಷ್ಟ ಜಾತಿಗಳ ವರ್ಗೀಕರಣ (ಒಳ ಮೀಸಲಾತಿ) ಕುರಿತು ಭಾರತದ ಸಂವಿಧಾನ ಅನುಚ್ಛೇದ 341ಕ್ಕೆ ತಿದ್ದುಪಡಿ ಮಾಡಲು ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಬಗ್ಗೆ. | ಪ್ರಸ್ತುತ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶಗಳನುಸಾರ ಪರಿಶಿಷ್ಟ ಜಾತಿಗಳನ್ನು ವರ್ಗೀಕರಿಸಿ, ಅನುಷ್ಠಾನಗೊಳಿಸಬೇಕಾದಲ್ಲಿ, ರಾಷ್ಟ್ರೀಯ ಆಯೋಗದ ಶಿಫಾರಸ್ಸಿನಂತೆ ಭಾರತ ಸಂವಿಧಾನಕ್ಕೆ ತಿದ್ದುಪಡಿ ತರುವುದು ಅಗತ್ಯವಿರುತ್ತದೆ. ಆದ್ದರಿಂದ ಭಾರತ ಸರ್ಕಾರದ ಸಂವಿಧಾನದ ಅನುಚ್ಛೇದ 341ರಲ್ಲಿ ಹೊಸದಾಗಿ Clause (3) ನ್ನು ಸೇರ್ಪಡೆ ಮಾಡಿ ಪರಿಶಿಷ್ಟ ಜಾತಿಗಳಲ್ಲಿ ವರ್ಗೀಕರಣ (ಒಳ ಮೀಸಲಾತಿ) ಬಗ್ಗೆ ಅನುಚ್ಛೇಧ 341(3)ನ್ನು ಹೊಸದಾಗಿ ಸೇರಿಸುವ ಬಗ್ಗೆ ರಾಜ್ಯ ಸರ್ಕಾರದಿಂದ ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಪ್ರಸ್ತಾಪಿಸಲಾಗಿದೆ. | • ಕರ್ನಾಟಕ ಸರ್ಕಾರ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ 101 ಪರಿಶಿಷ್ಟ ಜಾತಿಗಳಿವೆ. | ಸಂವಿಧಾನ ಅನುಚ್ಛೇಧ 341ಕ್ಕೆ ಹೊಸದಾಗಿ Clause (3) ನ್ನು ಸೇರ್ಪಡೆ ಮಾಡಲು ಈ ಕೆಳಕಂಡ ಉಪಬಂಧವನ್ನು ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಸಚಿವ ಸಂಪುಟ ಒಪ್ಪಿದೆ.<br>"341(3) Parliament may be law provide for Sub-categorization or De-sub-categorization of caste, race or tribe or part of or group within any caste, race or tribe specified in a notification issued under clause (1) or by law made by Parliament under clause (2), upon receiving the appropriate recommendation from the State/UT Governments (or resolution from legislature of a state/UT passed unanimously)" |

| | | | | |
|---|---|---|---|---|
| | | | | ಭೋವಿ, ಬಂಜಾರ, ಕೊರಮ ಮತ್ತು ಕೊರಚ ಜಾತಿಗಳು ಹಾಗೂ ಅದರ ಪರ್ಯಾಯ ಜಾತಿಗಳು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿದ್ದು, ಅದನ್ನು ಹಾಗೇಯೇ ಉಳಿಸಿಕೊಳ್ಳುವಂತೆ ಹಾಗೂ ಕರ್ನಾಟಕ ರಾಜ್ಯಕ್ಕೆ ಸೇರಿದ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಅವುಗಳನ್ನು ಮುಂದುವರೆಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಸಚಿವ ಸಂಪುಟ ಅನುಮೋದನೆ ನೀಡಿದೆ. |

| | | | | |
|---|---|---|---|---|
| 26 | **<u>ಪ್ರವಾಸೋದ್ಯಮ ಇಲಾಖೆ:</u>** ಅರಣ್ಯ, ವಸತಿ ಮತ್ತು ವಿಹಾರಧಾಮಗಳ ಸಂಸ್ಥೆಯು ಬೆಂಗಳೂರಿನ ಹಲಸೂರು ಕೆರೆಯ ಬಳಿ ಕೆನ್ಸಿಂಗ್ ಟನ್ ರಸ್ತೆಯಲ್ಲಿ "ಪ್ರವಾಸಿ ಸೌಧ" ಕಟ್ಟಡವನ್ನು ರೂ.18.00 ಕೋಟಿಗಳ ಅಂದಾಜು ಮೊತ್ತದಲ್ಲಿ ನಿರ್ಮಾಣ ಮಾಡಲು ಆಡಳಿತಾತ್ಮಕ ಅನುಮೋದನೆ ನೀಡಿ, ಪ್ರವಾಸೋದ್ಯಮ ಇಲಾಖೆಯು ದಿನಾಂಕ: 29.11.2023 ರಂದು ಹೊರಡಿಸಿರುವ ಆದೇಶಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗ್ಗೆ. | ಪ್ರಸ್ತುತ ಪ್ರವಾಸೋದ್ಯಮ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಬರುವ ಪ್ರವಾಸೋದ್ಯಮ ನಿರ್ದೇಶನಾಲಯ, ಕೆ.ಎಸ್.ಟಿ.ಡಿ.ಸಿ, ಜೆ.ಎಲ್.ಆರ್, ಕೆ.ಟಿ.ಐ.ಎಲ್ ಕಚೇರಿಗಳು ಬಾಡಿಗೆ ಆಧಾರದ ಮೇಲೆ ಬೇರೆ ಬೇರೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.<br><br>ಈ ಎಲ್ಲಾ ಇಲಾಖೆ/ನಿಗಮ/ ಸಂಸ್ಥೆಗಳನ್ನು ಒಂದೇ ಸೂರಿನಡಿ ಕಾರ್ಯನಿರ್ವಹಿಸಲ ಪ್ರಸ್ತಾಪಿಸಲಾಗಿದೆ. | • ಒಟ್ಟು ಯೋಜನಾ ವೆಚ್ಚ ರೂ.18.00 ಕೋಟಿಗಳು.<br>• "ಪ್ರವಾಸಿ ಸೌಧ" ನಿರ್ಮಾಣ. | ಅರಣ್ಯ, ವಸತಿ ಮತ್ತು ವಿಹಾರಧಾಮಗಳ ಸಂಸ್ಥೆಯು ಬೆಂಗಳೂರಿನ ಹಲಸೂರು ಕೆರೆಯ ಬಳಿ ಕೆನ್ಸಿಂಗ್ ಟನ್ ರಸ್ತೆಯಲ್ಲಿ "ಪ್ರವಾಸಿ ಸೌಧ" ಕಟ್ಟಡವನ್ನು ರೂ.18.00 ಕೋಟಿಗಳ ಅಂದಾಜು ಮೊತ್ತದಲ್ಲಿ ನಿರ್ಮಾಣ ಮಾಡಲು ಆಡಳಿತಾತ್ಮಕ ಅನುಮೋದನೆ ನೀಡಿ, ಪ್ರವಾಸೋದ್ಯಮ ಇಲಾಖೆಯು ದಿನಾಂಕ: 29.11.2023 ರಂದು ಹೊರಡಿಸಿರುವ ಆದೇಶಕ್ಕೆ ಘಟನೋತ್ತರ ಅನುಮೋದನೆ ನೀಡಿದೆ. |

| | | | | |
|---|---|---|---|---|
| 27 | **<u>ಸಾರಿಗೆ ಇಲಾಖೆ:</u>**<br>ರಾಜ್ಯದಲ್ಲಿ ನೋಂದಾಯಿತ ವಾಹನಗಳ ಸ್ಕ್ರಾಪಿಂಗ್ ಪಾಲಿಸಿ, 2022ರ ಕ್ರಮ ಸಂಖ್ಯೆ: 9ನ್ನು ಪರಿಷ್ಕರಿಸಿ, ಜಾರಿಗೊಳಿಸುವ ಬಗ್ಗೆ. | ಈಗಾಗಲೇ ಜಾರಿಗೆ ತಂದಿರುವ Registered Vehicle Scrapping Policy 2022 ನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ವಾಯುಮಾಲಿನ್ಯ ತಡೆಗಟ್ಟಲು ಸಹಕಾರಿಯಾಗಲಿದೆ. ಬಳಕೆಗೆ ಯೋಗ್ಯವಲ್ಲದ ವಾಹನಗಳನ್ನು ನಾಶಪಡಿಸುವುದರಿಂದ ಅನಗತ್ಯ ಅಪಘಾತ ಮತ್ತು ಅದರಿಂದಾಗುವ ಜೀವ–ಹಾನಿ ನಷ್ಟಗಳನ್ನು ತಡೆಗಟ್ಟಬಹುದಾಗಿದೆ. | | "ರಾಜ್ಯದಲ್ಲಿ ನೋಂದಾಯಿತ ವಾಹನಗಳ ಸ್ಕ್ರಾಪಿಂಗ್ ಪಾಲಿಸಿ, 2022ರ ಕ್ರಮ ಸಂಖ್ಯೆ: (9)ರ ಪಟ್ಟಿಯಲ್ಲಿ ತೆರಿಗೆಯನ್ನು ಅನುಬಂಧದಂತೆ ಪರಿಷ್ಕರಿಸಿ ಜಾರಿಗೆ ತರಲು ಸಚಿವ ಸಂಪುಟ ಒಪ್ಪಿದೆ. |

| | | | | |
|---|---|---|---|---|
| 28 | **<u>ನಗರಾಭಿವೃದ್ಧಿ ಇಲಾಖೆ:</u>** ಶ್ರೀ ಸಿದ್ದಾರ್ಥ ಮೆಮೋರಿಯಲ್ ಟ್ರಸ್ಟ್, ವಿಜಯಪುರ ಇವರಿಗೆ ಹಂಚಿಕೆಯಾಗಿರುವ ವಿಜಯಪುರ ಮಹಲಬಾಗಾಯತ್ ರಿ.ಸ.ನಂ. 75/ಬ ರ ನಿವೇಶನ ಸಂಖ್ಯೆ: 153ಕ್ಕೆ ಮೂಲ ಬೆಲೆಯ ಅರ್ಧ ಭಾಗದ ಶುಲ್ಕವನ್ನು ಭರಿಸಿಕೊಂಡು ನಿವೇಶನವನ್ನು ಹಂಚಿಕೆ ಮಾಡುವ ಬಗ್ಗೆ ಹಾಗೂ ಬಾಕಿ ಬಡ್ಡಿ ಪಾವತಿಸುವುದರಿಂದ ವಿನಾಯಿತಿ ನೀಡುವ ಬಗ್ಗೆ. | | | ಅಧ್ಯಕ್ಷರು, ಶ್ರೀ ಸಿದ್ದಾರ್ಥ ಮೆಮೋರಿಯಲ್ ಟ್ರಸ್ಟ್, ವಿಜಯಪುರ ಇವರಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ವಿಜಯಪುರ ಮಹಲಬಾಗಾಯತ್ ರಿ.ಸ.ನಂ. 75/ಬ ರ ನಾಗರಿಕ ಸೌಲಭ್ಯ ನಿವೇಶನ ಸಂಖ್ಯೆ: 153 ನೇದ್ದರ ಕ್ಷೇತ್ರ 10993.00 ಚ.ಮೀ (118284.68 ಚ.ಅಡಿ) ವಿಸ್ತೀರ್ಣವುಳ್ಳ ನಾಗರಿಕ ಸೌಲಭ್ಯ ನಿವೇಶನವನ್ನು ರೂ.88,71,351/– ಗಳಿಗೆ 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಿದ್ದು, ಈ ಪೈಕಿ ಅರ್ಜಿಯೊಂದಿಗೆ ರೂ.8,87,130/– ಗಳನ್ನು ಸಂಸ್ಥೆಯು ಪಾವತಿಸಿದ್ದು, ನಿವೇಶನದ ಮೂಲಬೆಲೆಯ (ರೂ.88,71,351) ಅರ್ಧ ಭಾಗದ ಹಣ ರೂ.44,35,675.50/– ಮತ್ತು ಪ್ರಸಕ್ತ ಸಾಲಿನವರೆಗೆ ಪಾವತಿಸಬೇಕಾಗಿರುವ ನಿವೇಶನದ ಮೂಲಬೆಲೆಯ ಬಡ್ಡಿಯ ಹಣಕ್ಕೆ ವಿನಾಯಿತಿ ಕೋರಲಾಗಿದ್ದು, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ನಿಯಮಗಳು 1991 ರನ್ವಯ ವಿನಾಯಿತಿ ನೀಡಲು ಅವಕಾಶವಿಲ್ಲದಿರುವುದರಿಂದ ಸದರಿ ಪ್ರಸ್ತಾವನೆಯನ್ನು ತಿರಸ್ಕರಿಸಲು; ಸಚಿವ ಸಂಪುಟ ಒಪ್ಪಿದೆ. |

| | | | | |
|---|---|---|---|---|
| 29 | **<u>ನಗರಾಭಿವೃದ್ಧಿ ಇಲಾಖೆ:</u>** ಕೊಡಗು ಜಿಲ್ಲೆಯ ಪೊನ್ನಂಪೇಟೆ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ. | ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಗಡಿಗಳನ್ನು ವಿಸ್ತರಿಸಲು ಮತ್ತು ಹೊಸ ನಗರ ಸ್ಥಳೀಯ ಸಂಸ್ಥೆಗಳನ್ನು ರೂಪಿಸಲು ಅವಕಾಶವಿದ್ದು, ತಾಲ್ಲೂಕು ಕೇಂದ್ರವಾಗಿರುವ ಕೊಡಗು ಜಿಲ್ಲೆಯ ಪೊನ್ನಂಪೇಟೆ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೇಗೇರಿಸಲು ಜಿಲ್ಲಾಧಿಕಾರಿಗಳು, ಕೊಡಗು ರವರು ಪ್ರಸ್ತಾಪಿಸಿರುತ್ತಾರೆ. | | ಕೊಡಗು ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿರುವ ಪೊನ್ನಂಪೇಟೆ ಗ್ರಾಮ ಪಂಚಾಯಿತಿಯೊಂದಿಗೆ ಬಲ್ಯಮಂಡೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಭಾಗಶ: ಮುಗುಟಗೇರಿ ಗ್ರಾಮವನ್ನೊಳಗೊಂಡ ಪ್ರದೇಶವನ್ನು 'ಪರಿವರ್ತಿತ ಪ್ರದೇಶ' ಎಂದು ಹಾಗೂ ಪೊನ್ನಂಪೇಟೆ 'ಪಟ್ಟಣ ಪಂಚಾಯಿತಿ' ಪ್ರದೇಶವೆಂದು ಉದ್ಘೋಷಿಸಲು ಸಚಿವ ಸಂಪುಟ ನಿರ್ಧರಿಸಿದೆ. |